# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿಕಾರಿಗಳನ್ನು ಚಲಾಯಿಸಿ ಮಾನ್ಯ ಆಡಳಿತಗಾರರ ದಿನಾಂಕ:27/09/2008ರ ನಡವಳಿಗಳು

**ವಿಷಯದ ಸಂಖ್ಯೆ:542/2008-09**

Construction of RCC Box drain from Ch:1820.00 m to 1880.00 m and construction of shops over the box drain (From US of broad way and to Armstrong road) in Challaghatta Valley, Package-2 ರ ಕಾಮಗಾರಿ ಬಗ್ಗೆ.

**ಪ್ರಸ್ತಾವನೆ:**

Construction of RCC Box drain from Ch:1820.00 m to 1880.00 m and construction of shops over the box drain (From US of broad way and to Armstrong road) in Challaghatta Valley, Package-2 ರ ಕಾಮಗಾರಿಗೆ ಬೃಹತ್ ನೀರುಗಾಲುವೆ ನವೀಕರಣ ಯೋಜನೆ, ಚಲ್ಲಘಟ್ಟ ಕಣಿವೆ, ಪ್ಯಾಕೇಜ್-2 ರ ಕಾಮಗಾರಿಗೆ ಮಾನ್ಯ ಆಯುಕ್ತರವರ ಆದೇಶದಂತೆ ಅಂದಾಜು ಪಟ್ಟಿಯನ್ನು ರೂ.99.99 ಲಕ್ಷಗಳಿಗೆ ತಯಾರಿಸಿದ್ದು, ಎರಡು ಲಕೋಟೆ ಪದ್ಧತಿಯಲ್ಲಿ ಕಾರ್ಯಪಾಲಕ ಅಭಿಯಂತರರು (ಚಲ್ಲಘಟ್ಟ ಕಣಿವೆ) ರವರು ಟೆಂಡರ್ ಕರೆದಿರುತ್ತಾರೆ.

ಸದರಿ ಕಾಮಗಾರಿಯ ಟೆಂಡರ್‌ನಲ್ಲಿ ಶ್ರೀ ಕೆ.ಬಾಬು ರಾಜು ಮತ್ತು ಶ್ರೀ ಕೆ.ವಿ.ಪ್ರಸಾದ ರಾವ್ ಗುತ್ತಿಗೆದಾರರುಗಳು ಭಾಗವಹಿಸಿದ್ದು, ತಾಂತ್ರಿಕ ಬಿಡ್ಡ್‌ನಲ್ಲಿ ಇಬ್ಬರು ಗುತ್ತಿಗೆದಾರರುಗಳು ಅರ್ಹರಾದ ಹಿನ್ನಲೆಯಲ್ಲಿ ಸದರಿಯವರುಗಳ ಆರ್ಥಿಕ ಬಿಡ್ಡ್‌ಗಳನ್ನು ತೆರೆದು ತುಲನಾತ್ಮಕ ಪಟ್ಟಿಯನ್ನು ತಯಾರಿಸಲಾಗಿದ್ದು, ವಿವರಗಳು ಕೆಳಕಂಡಂತಿವೆ;

| ಕ್ರ ಸಂ | ಗುತ್ತಿಗೆದಾರರ ಹೆಸರು | ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) | ಟೆಂಡರ್‌ಗಿಟ್ಟ ಮೊತ್ತ (ರೂ. ಗಳಲ್ಲಿ) | ನಮೂದಿಸಿರುವ ಶೇಕಡವಾರು (ಮೊತ್ತ ರೂ. ಗಳಲ್ಲಿ) |
|---|---|---|---|---|
| 1 | ಶ್ರೀ ಕೆ.ಬಾಬು ರಾಜು | 99.99 | 95,26,275.94 | 31.22 % ರಷ್ಟು ಹೆಚ್ಚು (ರೂ.1,24,99,950.75) |
| 2 | ಶ್ರೀ ಕೆ.ವಿ.ಪ್ರಸಾದ ರಾವ್ | 99.99 | 95,26,275.94 | 35.03 % ರಷ್ಟು ಹೆಚ್ಚು (ರೂ.1,27,83,592.25) |

ಶ್ರೀ ಕೆ.ಬಾಬು ರಾಜು ರವರು ಕಡಿಮೆ ದರ ನಮೂದಿಸಿರುವ ಗುತ್ತಿಗೆದಾರರಾಗಿದ್ದು, ಸದರಿಯವರು ನಮೂದಿಸಿರುವ ಮೊತ್ತ ರೂ. 1,24,99,950.75 ಗಳನ್ನು 2008-09ನೇ ಸಾಲಿನ ದರಪಟ್ಟಿಯ ಆಧಾರದ ಮೇಲೆ ತಯಾರಿಸಿದ ಅಂದಾಜು ಪಟ್ಟಿಯ ಮೊತ್ತಕ್ಕೆ ತುಲನೆ ಮಾಡಿದಾಗ ಶೇ.31.22% ಹೆಚ್ಚಿರುತ್ತದೆ. ಸದರಿ ಮೊತ್ತವು ಹೆಚ್ಚಾದುದ್ದರಿಂದ ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲಾಗಿ, ಸದರಿ ಕಾಮಗಾರಿಯನ್ನು ತುರ್ತಾಗಿ ಪೂರ್ಣಗೊಳಿಸಬೇಕಾಗಿದ್ದು, ವಿಶೇಷ ಮತ್ತು ಆದ್ಯತೆ ಮೇಲೆ ತೆಗೆದುಕೊಳ್ಳಬೇಕಾಗಿರುವುದರಿಂದ ಗುತ್ತಿಗೆದಾರರು ಈಗಿನ ತ್ರೈಮಾಸಿಕ ಸಿಮೆಂಟ್ ಮತ್ತು ಉಕ್ಕಿನ ದರಗಳನ್ನು ಅಳವಡಿಸಿಕೊಂಡಿರುವ ಮೊತ್ತದ ಶೇ.24.85 (ರೂ.1,18,93,555.51) ಗಳಿಗೆ ಹೆಚ್ಚುವರಿಯಾಗಿ ನಿರ್ವಹಿಸಲು ಒಪ್ಪಿರುತ್ತಾರೆ.

ಈ ಹಿನ್ನಲೆಯಲ್ಲಿ ಸದರಿ ಕಾಮಗಾರಿ ಅಂದಾಜು ಪಟ್ಟಿ, ಟೆಂಡರ್ ಹಾಗೂ ಗುತ್ತಿಗೆದಾರರು ಸಂಧಾನದ ನಂತರ ನಮೂದಿಸಿರುವ ಮೊತ್ತ ರೂ. 1,18,93,555.51 ಗಳಿಗೆ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:11/09/2008ರ ಟಿಪ್ಪಣಿ.

**ತೀರ್ಮಾನ:-** ಆಯುಕ್ತರವರ ದಿನಾಂಕ:11/09/2008ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:27/09/2008ರ ನಡವಳಿಗಳು**

**ವಿಷಯದ ಸಂಖ್ಯೆ:543/2008-09**

Territorial Army(Bangalore Terriers)Welfare Fund ಅಥವಾ Corpus Fund ನಿಧಿಗಾಗಿ ಪಾಲಿಕೆ ವತಿಯಿಂದ ಅನುದಾನ / ಸಹಾಯಧನ ಮಂಜೂರು ಮಾಡುವ ಬಗ್ಗೆ.

**ಪ್ರಸ್ತಾವನೆ:**

ಶ್ರೀ.ಹೆಚ್.ಆರ್.ಎಸ್.ರಾಣ LtCol 21C for CO 106, ಇನ್ ಪೆಂಟ್ರಿ ರಸ್ತೆ, ಬೆಟಾಲಿಯನ್ (TA) ಬ್ಯಾರಕ್ಸ್, ಇಂಡರ್ ಗಿಲ್ ಲೈನ್ಸ್, ಬೆನ್ಸನ್ ಟೌನ್, ಬೆಂಗಳೂರು-46, ರವರು ಮನವಿ ಸಲ್ಲಿಸಿ Territorial Army(Bangalore Terriers)Welfare Fund ಅಥವಾ Corpus Fund ನಿಧಿಗಾಗಿ ಪಾಲಿಕೆ ವತಿಯಿಂದ 2007-08ನೇ ಸಾಲಿನಲ್ಲಿ ಮಂಜುರು ಮಾಡಲ್ಪಟ್ಟ ರೂ.2.00 ಲಕ್ಷಗಳನ್ನು ತಮ್ಮ ಯೂನಿಟಿಗೆ ಸಂಬಂಧಿಸಿದ ಸೈನಿಕ ಮತ್ತು ಸೈನಿಕರ ಕುಟುಂಬಗಳ ಪುನರ್ವಸತಿ ಹಾಗೂ ಕಲ್ಯಾಣ ಕಾರ್ಯಕ್ರಮಗಳಿಗೆ ಮತ್ತು ಇನ್ನಿತರೆ ಸೌಲಭ್ಯಗಳನ್ನು ಒದಗಿಸಲು ಬಳಸಲಾಗಿದೆ ಎಂದು ತಿಳಿಸಿರುತ್ತಾರೆ.

ಪ್ರತಿ ವರ್ಷ ಅಕ್ಟೋಬರ್ ಮಾಹೆಯ 9ನೇ ತಾರೀಖಿನಂದು Territorial Army Day ಆಚರಿಸಲಾಗುವುದೆಂದು, ಈ ದಿನಾಂಕದೊಳಗೆ ಸಹಾಯವನ್ನು ಒದಗಿಸಿ ಆಚರಣೆಗೆ ಬಳಸಿಕೊಂಡು ಉಳಿಕೆ ಮೊತ್ತವನ್ನು ಕಲ್ಯಾಣ ಕಾರ್ಯಕ್ರಮಗಳಿಗೆ ಮೀಸಲಿಡಲಾಗುವುದೆಂದು ತಿಳಿಸಿ, ಸೈನಿಕರ ಮತ್ತು ಸೈನಿಕರ ಕುಟುಂಬಗಳ ಅಗತ್ಯಗಳಿಗಾಗಿ ಸಹಾಯಧನವನ್ನು ಪ್ರಸಕ್ತ 2008-09ನೇ ಸಾಲಿಗೆ ಬಿಡುಗಡೆ ಮಾಡಲು ಮನವಿ ಮಾಡಿರುತ್ತಾರೆ.

ಮೇ//ನಂದುಕುಮಾರ್.ಬಿ.ಎನ್. ರವರು ಸಲ್ಲಿಸಿದ್ದ ಮನವಿಯನ್ವಯ "ಬೆಂಗಳೂರು ಟೆರೀಯರ್ಸ್"ನ "ಬೆಂಗಳೂರು ಟೆರೀಯರ್ಸ್ ಪಂಡ್ "ಗಾಗಿ 2008-09ನೇ ಸಾಲಿನಲ್ಲಿ ರೂ.2.00 ಲಕ್ಷಗಳ ಸಹಾಯಧನವನ್ನು ಆಡಳಿತಗಾರರು ವಿಷಯದ ಸಂಖ್ಯೆ:373/08-09ರ ಅನ್ವಯ ಮಂಜೂರು ಮಾಡಿರುತ್ತಾರೆ. ಸದರಿ ಅಧಿಕಾರಿಯವರು ಈ ಕಛೇರಿಗೆ ಮುಕ್ತ ಭೇಟಿ ನೀಡಿದ ಸಂದರ್ಭದಲ್ಲಿ ತಮ್ಮ ಯುನಿಟ್ ಭಾಗಶಃ ಸಾರ್ವಜನಿಕ ದಳವೆಂದು ಇವರ ಕಲ್ಯಾಣ ಕಾರ್ಯಕ್ರಮಗಳಿಗೆ ಈ ಸಹಾಯಧನವನ್ನು ಬಳಸಲಾಗುವುದೆಂದು, ಕಳೆದ ಸಾಲಿನಲ್ಲಿ ಮಂಜೂರಾದ ಸಹಾಯಧನವು ಸೈನಿಕರ ಮತ್ತು ಸೈನಿಕರ ಕುಟುಂಬಗಳ ಕಲ್ಯಾಣ ಕಾರ್ಯಕ್ರಮಗಳಿಗೆ ಮಂಜೂರು ಮಾಡಲ್ಪಟ್ಟಿದೆಂದು ಪ್ರಸಕ್ತ ಸಾಲಿಗೆ **"ಬೆಂಗಳೂರು ಟೆರಿಯರ್ಸ್ ಟೆರಿಟೋರಿಯಲ್ ಆರ್ಮಿ ಕಾಪ್ಸ್ ಫಂಡ್ "** ಗಾಗಿ ಅನುದಾನವನ್ನು ಪ್ರತ್ಯೇಕವಾಗಿ ಬಿಡುಗಡೆ ಮಾಡಲು ಮನವಿ ಮಾಡಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಮಾನ್ಯ ಆಡಳಿತಗಾರರ ಗಮನಕ್ಕೆ ತರುತ್ತಾ, ಪ್ರಸ್ತಾಪಿತ ಸೈನಿಕದಳದ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ 2008-09ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ-24, ಸಂಸ್ಕೃತಿ ಮತ್ತು ಕ್ರೀಡೆ, ಕೊಡುಗೆ ಮತ್ತು ಸಹಾಯಾನುದಾನದಡಿ ಮೀಸಲಿರಿಸಿರುವ ರೂ.285.00 ಲಕ್ಷಗಳಲ್ಲಿ ಅನುಸೂಚಿ-6ರಲ್ಲಿರುವಂತೆ, ಇತರೇ ಸಂಘ ಸಂಸ್ಥೆಗಳಿಗೆ ಮೀಸಲಿರಿಸಿರುವ ರೂ.50.00 ಲಕ್ಷಗಳ ಅನುದಾನದಲ್ಲಿ ಈ ಯುನಿಟ್‌ಗೆ 2008-09ನೇ ಸಾಲಿಗೆ ರೂ.2.00 ಲಕ್ಷಗಳ ಸಹಾಯಧನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ತೀರ್ಮಾನಕ್ಕಾಗಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:20/9/2008ರ ಟಿಪ್ಪಣಿ.

**ತೀರ್ಮಾನ-** ಆಯುಕ್ತರವರ ದಿನಾಂಕ:20/9/2008ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:27/09/2008ರ ನಡವಳಿಗಳು**

**ವಿಷಯದ ಸಂಖ್ಯೆ:545/2008–09**

ಸುಂಕದ ಕಟ್ಟೆಯಿಂದ ನೈಸ್ ರಸ್ತೆಯವರೆಗೆ ಮಾಗಡಿ ರಸ್ತೆಯನ್ನು 4 ಪಥಗಳ ರಸ್ತೆಗಳನ್ನಾಗಿ ನಿರ್ಮಿಸುವ ಬಗ್ಗೆ.

**ಪ್ರಸ್ತಾವನೆ:–**

ಮಾಗಡಿ ರಸ್ತೆಯಲ್ಲಿ ವಾಹನ ಸಂಚಾರದ ದಟ್ಟಣೆಯು ಅಧಿಕವಾಗಿದ್ದು, ಮಾಗಡಿ ರಸ್ತೆಯನ್ನು ಕೆ.ಎಂ.ಆರ್.ಪಿ. ವಿಭಾಗದಿಂದ ಸುಂಕದ ಕಟ್ಟೆಯವರೆಗೆ ಅಭಿವೃದ್ಧಿಪಡಿಸಲಾಗಿರುತ್ತದೆ. ಸುಂಕದ ಕಟ್ಟೆಯಿಂದ ನೈಸ್ ರಸ್ತೆವರೆಗಿನ 4.50 ಕಿ.ಮೀ.ಗಳ ರಸ್ತೆಯ ಭಾಗವು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿದ್ದು, ಹಾಲಿ ರಸ್ತೆಯ ಎರಡು ಪಥಗಳ ರಸ್ತೆಯನ್ನು ನಾಲ್ಕು ಪಥಗಳ ರಸ್ತೆಯಾಗಿ ನಿರ್ಮಿಸುವುದು ಅವಶ್ಯಕವಾಗಿರುತ್ತದೆ. ಈ ಸಂಬಂಧ ಈ ರಸ್ತೆಯ ಅಭಿವೃದ್ಧಿ ನಿಟ್ಟಿನಲ್ಲಿ ಪೂರ್ಣ ಪ್ರಮಾಣದ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ರಸ್ತೆಯ ಈಗಿನ ಭೌತಿಕ ವ್ಯವಸ್ಥೆ ಹಾಗೂ ನಿರ್ವಹಿಸಬೇಕಾಗಿರುವ ಅಂಶಗಳ ಸಂಬಂಧ ಅವಶ್ಯಕ ತಾಂತ್ರಿಕ ವಿನ್ಯಾಸಗಳನ್ನೊಳಗೊಂಡ ಅಂದಾಜು ಪಟ್ಟಿಯನ್ನು ತಯಾರಿಸಬೇಕಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಸುಂಕದ ಕಟ್ಟೆಯಿಂದ ನೈಸ್ ರಸ್ತೆಯವರೆಗೆ ಮಾಗಡಿ ರಸ್ತೆಯನ್ನು 4 ಪಥಗಳ ರಸ್ತೆಯಾಗಿ ನಿರ್ಮಿಸಲು ಕೈಗೆತ್ತಿಕೊಳ್ಳಬೇಕಾದ ಸರ್ವೆ ಮತ್ತು ರಸ್ತೆಯ ಅಭಿವೃದ್ಧಿಗಾಗಿ ಅಗತ್ಯವಿರುವ ಅಂಶಗಳನ್ನು ಅಳವಡಿಸಿ ಅಂದಾಜುಪಟ್ಟಿ ಸಿದ್ಧಪಡಿಸಲು ಸಲಹೆಗಾರರನ್ನು ನೇಮಿಸಬಹುದಾಗಿರುತ್ತದೆ. ಈಗಾಗಲೇ ಪಾಲಿಕೆಯಲ್ಲಿನ Empanelled ಸಲಹೆಗಾರರಲ್ಲಿ ಒಬ್ಬರಾದ M/s Transport Training Institute and Consultancy ರವರಿಗೆ ಪತ್ರ ಮುಖೇನ ರಸ್ತೆಯ ಅಭಿವೃದ್ಧಿಗೆ ಅಗತ್ಯವಿರುವ ಪೂರ್ಣವಾದ ವಿವರಗಳನ್ನು ನೀಡಲು ಕೆ.ಟಿ.ಪಿ.ಪಿ. ಕಾಯ್ದೆ 28 E ರ ಅನ್ವಯ ವಹಿಸಲು ತಿಳಿಸಲಾಗಿರುತ್ತದೆ. ಇದಕ್ಕೆ ಪ್ರತ್ಯುತ್ತರವಾಗಿ M/s Transport Training Institute and Consultancy ರವರು ಈ ಕಾಮಗಾರಿಗೆ ರೂ.4,27,500.00 ಗಳ ಮೊತ್ತವನ್ನು ಕೋರಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಕೆಳಕಂಡಂತೆ ಅನುಮೋದನೆ ಕೋರಿ ಮಂಡಿಸಿದೆ.

1) ಮಾಗಡಿ ರಸ್ತೆಯಲ್ಲಿ ಸುಂಕದ ಕಟ್ಟೆಯಿಂದ ನೈಸ್ ರಸ್ತೆಯವರೆಗೆ 4.50 ಕಿ.ಮೀ. ರಸ್ತೆಯನ್ನು ನಾಲ್ಕು ಪಥಗಳ ರಸ್ತೆ ನಿರ್ಮಾಣಕ್ಕಾಗಿ ಅಗತ್ಯವಿರುವ ಅಂಶಗಳನ್ನು ಅಳವಡಿಸಿ ವಿವರವಾದ ವರದಿಯನ್ನು ಸಿದ್ಧಪಡಿಸಿ ಅಂದಾಜು ಪಟ್ಟಿ ಹಾಗೂ ಇತರೆ ನಕ್ಷೆಗಳನ್ನು ಸಿದ್ದಪಡಿಸಲು ಕೆ.ಟಿ.ಪಿ.ಪಿ. ಕಾಯ್ದೆ 28 E ಅಡಿಯಲ್ಲಿ M/s Transport Training Institute and Consultancy ರವರನ್ನು ನೇಮಿಸಲು ಅನುಮೋದನೆ.

2) ಮೇಲಿನ ಕೆಲಸಕ್ಕಾಗಿ M/s Transport Training Institute and Consultancy ರವರು ನಮೂದಿಸಿರುವ ರೂ.4,27,500.00 (ರೂ. ನಾಲ್ಕು ಲಕ್ಷದ ಇಪ್ಪತ್ತೇಳು ಸಾವಿರದ ಐನ್ನೂರು ಮಾತ್ರ) ಗಳಿಗೆ ಅನುಮೋದನೆ.

ಮೇಲ್ಕಂಡ ಅಂಶಗಳಿಗೆ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:19/09/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:19/09/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್‌ರಾವ್)
ಆಡಳಿತಗಾರರು

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:27/09/2008ರ ನಡವಳಿಗಳು**

**ವಿಷಯದ ಸಂಖ್ಯೆ:544/2008–09**

Providing Asphalting to Unasphalted Roads/Resurfacing selected Roads including Drainage Culverts in Ward No.73ರ ಕಾಮಗಾರಿ ಬಗ್ಗೆ.

**ಪ್ರಸಾವನೆ:–**

Providing Asphalting to Unasphalted Roads/Resurfacing selected Roads including Drainage Culverts in Ward No.73ರ ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು, ಶಾಂತಿನಗರ–2 ವ್ಯಾಪ್ತಿಯಲ್ಲಿ ಬರುವ ರಸ್ತೆಗಳಿಗೆ ಪ್ಯಾಕೇಜ್ ಅಡಿಯಲ್ಲಿ ಅಭಿವೃದ್ಧಿಪಡಿಸುವ ಸಲುವಾಗಿ ರೂ.99.50 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು 2007–08ನೇ ಸಾಲಿನ ದರಪಟ್ಟಿಯಂತೆ ತಯಾರಿಸಿ ಸಲ್ಲಿಸಿರುತ್ತಾರೆ. ಈ ರಸ್ತೆಗಳು ತುಂಬಾ ದುಸ್ಥಿತಿಯಲ್ಲಿದ್ದು ಸಾರ್ವಜನಿಕರು ಓಡಾಡಲು ತೊಂದರೆಯಾಗಿರುತ್ತದೆ. ಈ ರಸ್ತೆಗಳಲ್ಲಿ ವಾಹನ ಸಂಚಾರವು ದುಸ್ಥರವಾಗಿದ್ದು, ಅಲ್ಲಲ್ಲಿ ಗುಂಡಿಗಳು ಬಿದ್ದಿರುತ್ತದೆ. ಈ ರಸ್ತೆಗಳಿಗೆ ಸುಮಾರು 10 ವರ್ಷಗಳಿಂದ ಯಾವುದೇ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಂಡಿರುವುದಿಲ್ಲ. ಆದುದರಿಂದ ಈ ಕಾಮಗಾರಿಯನ್ನು ಅತ್ಯವಶ್ಯಕವಾಗಿ ತೆಗೆದುಕೊಳ್ಳಬೇಕಾಗಿರುತ್ತದೆ. ಈ ಕಾಮಗಾರಿಯನ್ನು ಪೂರೈಸಲು ಅಗತ್ಯವಾದ ಎಲ್ಲಾ ಅಂಶಗಳನ್ನು ಅಂದಾಜು ಪಟ್ಟಿಯಲ್ಲಿ ಅಳವಡಿಸಲಾಗಿದ್ದು, ಕಾಮಗಾರಿ ಸಂಕೇತವನ್ನು ಪಡೆಯಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ.99.50 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:20/09/2008ರ ಟಿಪ್ಪಣಿ.

**ತೀರ್ಮಾನ:–** ಆಯುಕ್ತರವರ ದಿನಾಂಕ:20/09/2008ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್‌ರಾವ್)
ಆಡಳಿತಗಾರರು.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ: 27/09/2008ರ ನಡವಳಿಗಳು**

**ವಿಷಯದ ಸಂಖ್ಯೆ:546/2008-09**

Providing and widening side drains, construction of culverts, asphalting in Doddakannelli main road from Gear College to Kadabisanahalli road at Doddakannelli villageರ ಕಾಮಗಾರಿ ಬಗ್ಗೆ.

**ಪ್ರಸ್ತಾವನೆ:**

Providing and widening side drains, construction of culverts, asphalting in Doddakannelli main road from Gear College to Kadabisanahalli road at Doddakannelli villageರ ಕಾಮಗಾರಿಗೆ 2007-08ನೇ ಸಾಲಿನ ದರಪಟ್ಟಿಯಂತೆ ರೂ.73.00 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಿ ಸಲ್ಲಿಸಿದ್ದು, ಸದರಿ ವೆಚ್ಚವನ್ನು 2008-09ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ – Zonal Engineering –public Works (Zonal) Zone works ನ ಅನುದಾನದಲ್ಲಿ ಭರಿಸಲು ಉದ್ದೇಶಿಸಿದ್ದು, ಕಾಮಗಾರಿ ಸಂಕೇತ ಪಡೆಯಲಾಗಿರುತ್ತದೆ. ಹಾಗೂ ಸದರಿ ಕಾಮಗಾರಿಯನ್ನು ಬೊಮ್ಮನಹಳ್ಳಿ ವಿಭಾಗದ ಕ್ರಿಯಾ ಯೋಜನೆಯಲ್ಲಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ.73.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:11/09/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:11/09/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:30/09/2008ರ ನಡವಳಿಗಳು

ವಿಷಯದ ಸಂಖ್ಯೆ:552/2008-09

ಬೆಂಗಳೂರು ಉತ್ತರ (ತಾ) ಯಶವಂತಪುರ ಹೋಬಳಿ, ತಿರುಮಲಾಪುರ ಗ್ರಾಮದ ಸರ್ವೆ ನಂ.8,9,10,13,14,16,19 ಮತ್ತು 22 ರಲ್ಲಿ ಸುಮಾರು 2.06 ಎಕರೆ ಗುಂಟೆ ಜಾಗವನ್ನು ನಾಗರೀಕ ಸೌಲಭ್ಯಗಳಾದ ರಸ್ತೆ ನಿರ್ಮಾಣಕ್ಕೆ ಭೂ-ಸ್ವಾಧೀನಪಡಿಸಿಕೊಳ್ಳುವ ಬಗ್ಗೆ.

ಪ್ರಸ್ತಾವನೆ:-

ಬೆಂಗಳೂರು ಉತ್ತರ (ತಾ) ಯಶವಂತಪುರ ಹೋಬಳಿ, **ತಿರುಮಲಾಪುರ** ಗ್ರಾಮದ ಸರ್ವೆ ನಂ.8 ರಲ್ಲಿ 0=01 ಗುಂಟೆ, 9 ರಲ್ಲಿ 0=15 ಗುಂಟೆ, 10 ರಲ್ಲಿ 0=30 ಗುಂಟೆ, 13ರಲ್ಲಿ 0=07 ಗುಂಟೆ, 14ರಲ್ಲಿ 0=12 ಗುಂಟೆ, 16 ರಲ್ಲಿ 0=11 ಗುಂಟೆ, 19ರಲ್ಲಿ 0=05 ಗುಂಟೆ, ಮತ್ತು ಸರ್ವೆ ನಂ.22 ರಲ್ಲಿ 0=05 ಗುಂಟೆ, ಒಟ್ಟು 2=06 ಎಕರೆ ಗುಂಟೆ ಜಮೀನನ್ನು ರಸ್ತೆ ನಿರ್ಮಾಣಕ್ಕಾಗಿ ಭೂ-ಸ್ವಾಧೀನಪಡಿಸಿಕೊಳ್ಳಲು ಜಂಟಿ ಆಯುಕ್ತರು, ದಾಸರಹಳ್ಳಿ ವಲಯ ರವರು ಪತ್ರ ಸಂಖ್ಯೆ: JC/DH/PS/59/2008-09 ರಲ್ಲಿ ಕೋರಿರುತ್ತಾರೆ.

ತಿರುಮಲಾಪುರ ಗ್ರಾಮದ ಸರ್ವೆ ನಂ.8,9,10,13,14,16,19 ಮತ್ತು 22 ರಲ್ಲಿ 2007-08ನೇ ಸಾಲಿನ ಪಹಣಿ ಪರಿಶೀಲಿಸಲಾಗಿ ಅದರ ವಿವರಗಳು ಈ ಕೆಳಕಂಡಂತಿರುತ್ತವೆ.

ತಿರುಮಲಾಪುರ ಗ್ರಾಮ:-

| ಕ್ರ ಸಂ | ಸರ್ವೆ ನಂ. | ಎಕರೆ-ಗುಂಟೆ | ಖಾತೆದಾರರು | ಅನುಭವದಾರರು | ಭೂ-ಸ್ವಾದೀನಕ್ಕೆ ಒಳಪಡುವ ವಿಸ್ತೀರ್ಣ ಎ-ಗುಂ | ಸರ್ಕಾರದ ಮಾರ್ಗಸೂಚಿ ಬೆಲೆಯನ್ವಯ ಎಕರೆ 1ಕ್ಕೆ ರೂ.25 ಲಕ್ಷದಂತೆ | [illegible] |
|---|---|---|---|---|---|---|---|
| 1 | 8 | 4.26<br>1.25 ಖರಾಬ್<br>3.01<br>ನಿವ್ವಳ ಖುಷ್ಕಿ | ಅಜಮ್ಮ<br>ಕೋಂ/ಲೇಟ್/ಹುಚ್ಚಹನುಮಯ್ಯ<br>ಗಂಗಮ್ಮ<br>ಕೋಂ/ಲೇಟ್/ಗಿರಿಯಪ್ಪ ಹುಚ್ಚಪ್ಪ | ಅಜಮ್ಮ<br>ಗಂಗಮ್ಮ<br>ಹುಚ್ಚಪ್ಪ | 00.01 | 0.01 ಗುಂಟೆಗೆ ರೂ.62,500/- | - |
| 2 | 9 | 6.09<br>ನಿವ್ವಳ ಖುಷ್ಕಿ | ಗಂಗಮ್ಮ<br>ಗಂಗಹನುಮಯ್ಯ<br>ಗೋವಿಂದರಾಜು<br>ಹೆಚ್.ರಾಮಕೃಷ್ಣ | ಗಂಗಮ್ಮ<br>ಗಂಗಹನುಮಯ್ಯ<br>ಗೋವಿಂದರಾಜು<br>ಹೆಚ್.ರಾಮಕೃಷ್ಣ | 00.15 | 00.15 ಗುಂಟೆಗೆ ರೂ.9,37,500/- | - |
| 3 | 10 | 8.36<br>0.09 ಖರಾಬ್<br>8.27<br>ನಿವ್ವಳ ಖುಷ್ಕಿ | ಆರ್.ನಾರಾಯಣಪ್ಪ ಬಿನ್ ಲೇಟ್‌ರಂಗಸ್ವಾಮಿ<br>ಆರ್.ಕೃಷ್ಣಮೂರ್ತಿ<br>ಬಿನ್ ಲೇಟ್.ರಂಗಸ್ವಾಮಿ | ಆರ್.ನಾರಾಯಣಪ್ಪ<br>ಆರ್.ಕೃಷ್ಣಮೂರ್ತಿ | 00.30 | 00.30 ಗುಂಟೆಗೆ ರೂ.18,75,000/- | - |
| 4 | 13 | 3.38<br>ಬಾಗಾಯ್ತು | ಹುಚ್ಚ ಹನುಮಯ್ಯ<br>ಬಿನ್ ಹುಚ್ಚಯ್ಯ<br>ಗಂಗಮ್ಮ<br>ಗಂಗಹನುಮಯ್ಯ ಹುಚ್ಚಪ್ಪ<br>ಗೋವಿಂದರಾಜು<br>ಹೆಚ್.ರಾಮಕೃಷ್ಣ | ಹುಚ್ಚ ಹನುಮಯ್ಯ<br>ಗಂಗಮ್ಮ<br>ಗಂಗಹನುಮಯ್ಯ<br>ಹುಚ್ಚಪ್ಪ<br>ಗೋವಿಂದರಾಜು<br>ಹೆಚ್.ರಾಮಕೃಷ್ಣ | 00.07 | 0.07 ಗುಂಟೆಗೆ ರೂ.4,37,500/- | - |

...2

ಮುಂದುವರೆದ ಪುಟಗಳನ್ನು ... 
240 ರಿಂದ ... ರವ ...